ತಂದೆ: ಯಾಕೋ ಮಗನೇ ನಾನು ಕಚೇರಿಯಿಂದ ಲೇಟಾಗಿ ಬಂದ್ರೂ ನಿಮ್ಮಮ್ಮ ಸುಮ್ಮನಿದ್ದಾಳಲ್ಲ?

ಮಗ: ಅದು ನನ್ನ ತಪ್ಪಿನಿಂದ ಡ್ಯಾಡಿ.

ತಂದೆ: ಅದ್ಹೇಗೋ?

ಮಗ: ಅಮ್ಮ ಲಿಪ್‌ಸ್ಟಿಕ್ ಕೊಡು ಅಂದ್ಲು, ನಾನು ತಪ್ಪಿ ಫೆವಿಕ್ವಿಕ್ ಕೊಟ್ಬಿಟ್ಟೆ.

***

ಆತ: ನನ್ನ ಹೆಂಡ್ತಿ ಇವತ್ತು ತವರು ಮನೆಗೆ ಹೋಗಿಬಿಟ್ಲು.

ಈತ: ಯಾಕೆ?

ಆತ: ಅತ್ತೆ – ಸೊಸೆ ನಡುವೆ ರಂಪಾಟ ಆಗಿ ಹೋಯ್ತು. ಅದ್ಕೇ ನಾನು ಇನ್ನು ಮರೆತು ಬಿಡ್ಬೇಕು ಅಂತ ಮಾಡೀನಿ.

ಈತ: ಯಾರು ಹೆಂಡ್ತೀಯನ್ನಾ?

ಆತ: ಇಲ್ಲ, ಅಮ್ಮನ್ನ!

***

ಆತ: ನನ್ನ ಹೆಂಡತಿ ಡೈವರ್ಸಿಗೆ ಅರ್ಜಿ ಹಾಕಿದಾಳೆ.

ಈತ: ಯಾಕೆ?

ಆತ: ಅವಳಿಗೆ ನನ್ನ ಕೈ ಅಡುಗೆ ಹಿಡ್ಸಲ್ವಂತೆ.

***


ತಿಮ್ಮ ಮದುವೆಯ ವಯಸ್ಸಿಗೆ ಬಂದ ಗಂಡು ಮಕ್ಕಳ ಅಭಿಪ್ರಾಯ ಕೇಳುತ್ತಿದ್ದ.

ಲೇ, ಬಸ್ಯಾ ನಿನಗೆಂಥ ಹೆಂಡತಿ ಬೇಕೋ?

ನನಗೆ ಅವಳೇ ದುಡೀತಿರ್ಬೇಕು ಡ್ಯಾಡಿ ಅಂಥ ಹೆಂಡತಿ ಬೇಕು ಅಂದ.

ನಿನಗೋ ಮಂಕ? ಇನ್ನೊಬ್ಬನನ್ನು ಪ್ರಶ್ನಿಸಿದರು.

ಅವಳ ಜೊತೆಗೆ ದುಡಿಯೋ ವಯಸ್ಸಿನ ಮಗನೂ ಇದ್ರೆ ಚೆನ್ನ.




ಆತ: ನನಗೆ ಬಂದಿರೋದು ಚೀನಾ ವೈರಸ್ಸೋ, ಬ್ರಿಟನ್ ವೈರಸ್ಸೋ ಅನ್ನೋದೇ ಚಿಂತೆಯಾಗಿದೆ.

ಈತ: ಯಾವ್ದು ಬಂದ್ರೆ ಏನೂ ಆಗದು ಬಿಡು.

ಆತ: ಹಾಗಲ್ಲ, ಮಾರಾಯಾ ನನಗೆ ಬ್ರಿಟನ್ ವೈರಸ್ಸೇ ಬರಲಿ.

ಈತ: ಅರೇ, ಯಾಕೆ?

ಆತ: ಚೀನಾ ನಮ್ಮ ವೈರಿ ರಾಷ್ಟ್ರ ಅಲ್ವಾ?

ತಿಮ್ಮ ಮೂರ್ಛೆ ಹೋಗೋದೊಂದೇ ಬಾಕಿ!

***

ಎಲ್ಲ ಪಕ್ಷಗಳ ನಾಯಕರೂ ಒಂದಾದರು. ಈ ಸವಿ ನೆನಪಿಗಾಗಿ ತಮ್ಮ ಕಾರ್ಯಕರ್ತರಿಗೆ ತರಬೇತಿಯೊಂದನ್ನು ಆಯೋಜಿಸಿದರು.

ತರಬೇತಿಯ ಸಂಪನ್ಮೂಲ ವ್ಯಕ್ತಿ ನಿಮ್ಮೆಲ್ಲರಿಗೂ ನಾಳೆಯಿಂದ ಸಲಹೆಗಳನ್ನು ನೀಡುತ್ತೇನೆ. ಇಂದು ರಾತ್ರಿ ನೀವು 'ಖರ್ಚಿ ಕರಾಮತ್ತು' ಗ್ರಂಥದ 10ನೇ ಅಧ್ಯಾಯವನ್ನು ಓದಿಕೊಂಡು ಬನ್ನಿ ಎಂದರು.

ಮರುದಿನ ಎಲ್ಲರೂ ಹಾಜರಾದರು.

ಎಷ್ಟು ಜನ 'ಖರ್ಚಿ ಕರಾಮತ್ತು' ಗ್ರಂಥದ 10ನೇ ಅಧ್ಯಾಯವನ್ನು ಓದಿಕೊಂಡು ಬಂದಿದ್ದೀರಿ ಕೈಎತ್ತಿ ಎಂದು ತರಬೇತಿಯ ಸಂಪನ್ಮೂಲ ವ್ಯಕ್ತಿ ಸೂಚಿಸಿದರು.

ಎಲ್ಲರೂ ಕೈ ಮೇಲಕ್ಕೆತ್ತಿದರು.

ಈಗ ತರಬೇತಿ ಆರಂಭಿಸುತ್ತೇನೆ. ತರಬೇತಿಗೆ ನೀವು ಸೂಕ್ತ ವ್ಯಕ್ತಿಗಳು. 'ಖರ್ಚಿ ಕರಾಮತ್ತು' ಎಂಬ ಗ್ರಂಥವೇ ಇಲ್ಲ ಎಂದರು ಖುಷಿಯಿಂದ.

***

ವೈದ್ಯ: ನಿಮ್ಮ ಹೆಂಡತಿ ಡಯಟ್ ಮಾಡತೊಡಗಿದಾಗಿನಿಂದ ಹೇಗಿದ್ದಾಳೆ?

ಪೆದ್ದ: ಅದನ್ನೇ ಹೇಳಲು ಬಂದೆ ಡಾಕ್ಟರೇ, ಅವಳು ಈಗ ಮಾಯವಾಗಿಬಿಟ್ಟಿದ್ದಾಳೆ!

***

ತಿಮ್ಮ: ನನ್ನ ಹೆಂಡತಿಗೆ ಒಂದು ದುರಭ್ಯಾಸವಿದೆ.

ಪೆದ್ದ: ಏನಿದೆ?

ತಿಮ್ಮ: ದಿನಾಲೂ ರಾತ್ರಿ ಒಂದು ಗಂಟೆಯವರೆಗೆ ಎಚ್ಚರವಾಗಿರ್ತಾಳೆ.

ಪೆದ್ದ: ಏನಾದರೂ ರೋಗವಿದೆಯಾ?

ತಿಮ್ಮ: ಹಾಗೇನಿಲ್ಲ ನಾನು ಬರೋದನ್ನು ಕಾಯ್ತಾ ಇರ್ತಾಳೆ.

(ಸಂಗ್ರಹ) ಪ್ರಕಾಶ ಎಸ್.ಮನ್ನಂಗಿ

---

ಗುಂಡ: ನಿನ್ನ ತಾಯಿ ಬರೋದು ಬೇಡಾ ಅಂತ ನಾನು ಕಾಗದ ಬರೆದಿದ್ದೆನಲ್ಲ?

ಹೆಂಡತಿ: ಹೌದು! ಆದರೆ, ಹಾಗೆ ಏಕೆ ಬರೆದಿದ್ದೀರೀ ಅಂತ ಕೇಳೋಕೆ ಅವರೇ ಬಂದಿದಾರೆ.

***

ಗುಂಡ: (ಪುಸ್ತಕ ಪ್ರದರ್ಶನದಲ್ಲಿ) ಸಣ್ಣ ಸಣ್ಣ ಪುಸ್ತಕಗಳನ್ನು ಕಂಡರೆ ನನಗೆ ಆಗುವುದಿಲ್ಲ.

ವ್ಯಾಪಾರಿ: ನೀವು ಪುಸ್ತಕ ವಿಮರ್ಶಕರಾ ಸಾರ್?

ಗುಂಡ: ಅಲ್ಲ. ನಾನು ರದ್ದಿಕಾಗದ ಕೊಳ್ಳುವವನು.

***

ತಾಯಿ: ಏನೋ ನೀನು ಪಕ್ಕದ ಮನೆಯ ಹುಡುಗಿಯನ್ನು ಪ್ರೀತಿಸುತ್ತಿದ್ದೀಯಾ?

ಮಗ: ಹೌದಮ್ಮಾ, 'ನಿಮ್ಮ ನೆರೆಹೊರೆಯವರನ್ನು ಪ್ರೀತಿಸಿ' ಅಂತ ನಮ್ಮ ಗುರುಗಳು ಹೇಳಿದ್ದಾರಮ್ಮ.

***

ಗುಂಡ: ಪಾಪ ಗೋಪಿಗೆ ನಿನ್ನೆಯಿಂದ ಕೆಟ್ಟಕಾಲ ಪ್ರಾರಭಂವಾಯಿತು.

ಗೆಳೆಯ: ಅರೆ ಹೌದಾ? ಹೇಗೆ?

ಗುಡ: ಅವನು ನನ್ನ ಹೆಂಡತಿಯ ಜೊತೆ ಓಡಿಹೋಗಿದ್ದಾನೆ.

***

ಶಾಸಕ: ನನ್ನ ಮಗನಿಗೆ ಒಂದು ಕೆಲಸ ಕೊಡೊಕೆ ಆಗುತ್ತಾ?

ಮ್ಯಾನೇಜರ್: ಅವನು ಯಾವ ಕೆಲಸ ಮಾಡುತ್ತಾನೆ?

ಶಾಸಕ: ಅವನು ಯಾವ ಕೆಲಸವನ್ನೂ ಮಾಡುವುದಿಲ್ಲ.

ಮ್ಯಾನೇಜರ್: ಕ್ಷಮಿಸಿ ಅವನು ಮಂತ್ರಿ ಆಗೋದನ್ನ ತಪ್ಪಿಸಲು ನನಗೆ ಮನಸ್ಸಿಲ್ಲ.

***

ರಾಣಿ: ರೀ ನಮ್ಮ ಪ್ರೇಮ ವ್ಯವಹಾರವೆಲ್ಲ ನಮ್ಮ ತಂದೆಗೆ ತಿಳಿದು ಹುಡುಗ ಎಲ್ಲಿ ಅಂತ ಕೇಳಿದರು.

ಗುಂಡ: ಅದಕ್ಕೆ ನೀನೇನು ಹೇಳಿದೆ?

ರಾಣಿ: ಹೊಟ್ಟೆಯಲ್ಲಿ ಬೆಳಿತಾ ಇದಾನೆ ಅಂತ ಹೇಳಿಬಿಟ್ಟೆ.

ಸಂಗ್ರಹ: ಎಂ.ಕೆ. ಮಂಜುನಾಥ್

***

---

## ಕಲ್ಲು

ಶಂಕರ ಆಸ್ಪತ್ರೆಯ ಒಳ ಹೋದ..

ರಿಸೆಪ್ಷನಿಸ್ಟ್: ಏನು?

ಶಂಕರ: ಕಲ್ಲು

ರಿಸಪ್ಷನಿಸ್ಟ್: ಓಹೋ...! ಹಾಗಾದರೆ ಅಲ್ಲಿ ಹೋಗಿ ಚೀಟಿ ಮಾಡಿಸಿ ಎಂದ.

ಕೌಂಟರ್‌ನಲ್ಲಿ ಹೆಸರು, ಅಡ್ರೆಸ್ ಕೊಟ್ಟು, ಚೀಟಿಯನ್ನು ಮಾಡಿಸಿದ ರೂಂ ನಂಬರ್ 4ಕ್ಕೆ ಹೋಗಲು ಹೇಳಿದರು.

ಶಂಕರ ಹೋಗಿ ಚೀಟಿ ಅಟೆಂಡರ್ ಕೈಯಲ್ಲಿ ಕೊಟ್ಟ.

ಅಟೆಂಡರ್: ಏನು?

ಶಂಕರ: ಕಲ್ಲು...

ಅಟೆಂಡರ್: ಷರ್ಟ್, ಪ್ಯಾಂಟ್ ಇಲ್ಲಿ ಬಿಚ್ಚಿಡಿ. ಶಂಕರ ಷರ್ಟ್, ಪ್ಯಾಂಟ್ ಬಿಚ್ಚಿ ಒಳ ಉಡುಪಿನಲ್ಲಿ ನಿಂತ.

ಅಟೆಂಡರ್ ಶಂಕರನ ಹೈಟ್, ವೈಟ್, ನೋಡಿ ಒಂದು ರಿಜಿಸ್ಟರ್‌ನಲ್ಲಿ ಬರೆದ.

ನಂತರ ನರ್ಸ್ ಬಂದು ಶಂಕರನ ಬಿ.ಪಿ ಚೆಕ್ ಮಾಡಿದಳು. ಆಮೇಲೆ ರಕ್ತ ಪರೀಕ್ಷೆಗೆ ಬ್ಲಡ್ ಮಾದರಿ ತೆಗೆದುಕೊಂಡು ಹೋದಳು.

ನಂತರ ಎಕ್ಸ್‌ರೇ, ಇ.ಸಿ. ಜಿಯೂ ತೆಗೆದರು...

ಒಂದು ಗಂಟೆ ಕಳೆದು ಡಾಕ್ಟರ್ ರೂಮಿಗೆ ಕರೆದ್ರು....

ಡಾಕ್ಟರ್: ಏನು?

ಶಂಕರ: ಕಲ್ಲು

ಡಾಕ್ಟರ್: ಎಲ್ಲಿ?

ಶಂಕರ: ಹೊರಗೆ ಲಾರಿಯಲ್ಲಿದೆ. ಅದನ್ನು ಎಲ್ಲಿ ಇಳಿಸಬೇಕು?

ಸಂಗ್ರಹ: ಬಿ ಆರ್ ಉಷಾ
ಬೆಂಗಳೂರು